ವರ್ಷವಾಯ್ತು. ಹದಿನೇಳನೆಯ ವರ್ಷಕ್ಕೆ ದಂಥೆಗಿಳಿದಿದ್ದಳು.'

ಇಬ್ಬರು ಹೆಣ್ಣು ಮಕ್ಕಳು ಒಳಗೆ ಹೋಗಿ ನಾರಾಯಣಿಯನ್ನು ಕರೆತಂದು ನಿಲ್ಲಿಸಿದರು.

ಅವಳು ಆಗಷ್ಟೆ ಹಾಸಿಗೆಯಿಂದ ಎದ್ದಂತೆ ಕಾಣುತ್ತಿತ್ತು. ಸ್ನಾನ ಮಾಡಿ ಹೊರಗೆ ಬಂದಂತಿತ್ತು. ಕೂದಲುಗಳಿಂದ ನೀರಿನ ಹನಿಗಳು ಉದುರುತ್ತಿದ್ದವು. ಅವಳ ಕೈಯಲ್ಲಿ ಕೂದಲು ಸರಿಪಡಿಸಿಕೊಂಡು ಕಟ್ಟುವ ಚಿಪ್ಪಳವಿತ್ತು. ಮುಡಿಗೆ ಮಲ್ಲಿಗೆಯ ಮಾಲೆ ಸಿಕ್ಕಿಸಿಕೊಂಡು ಎಡಬದಿಯಿಂದ ಹೆಗಲ ಮೇಲೆ ಜೋಲು ಬಿಟ್ಟಿದ್ದಳು. ಅವಳು ಒಂದು ಬಿಳಿಯ ಸೀರೆ ತುಂಬ ನಾಜೂಕಾಗಿ, ಕಲಾತ್ಮಕವಾಗಿ ಉಟ್ಟು ಮೈ ಮುಚ್ಚಿಕೊಂಡಿದ್ದಳು. ಅವಳದು ಪೂರ್ತಿ ಗೌರವವರ್ಣವಲ್ಲದಿದ್ದರೂ ಕಪೋಲಕ್ಕೆ ಕೆಂಪುಛಾಯೆಯಿತ್ತು. ಕಪ್ಪು ಕಣ್ಣುಗಳು, ಆಕರ್ಷಕ ಮೈಕಟ್ಟು, ಮುಖದಲ್ಲಿ ಸಂಕೋಚದ ಮಂದಹಾಸ, ಅವಳ ಉಡುಗೆ, ನಿಂತ ಠೀವಿ ನೋಡಿದರೆ ಐದು ಸಹೋದರರ ಮುದ್ದಿನ ಮನೆಯಲ್ಲಿ ಬೆಳೆದಂತೆ ಕಾಣುತ್ತಿತ್ತು. ಡೈರೆಕ್ಟರ್ ಅವಳನ್ನು ನೋಡಿ 'ಈ ಹುಡುಗಿಯಿಂದ ಆ ಪಾತ್ರ ಮಾಡಿಸುವುದು ಕಠಿಣ' ಎಂದು ಮನಸ್ಸಿನಲ್ಲಿ ಅಂದುಕೊಂಡ.

ಅಲ್ಲಿದ್ದ ಒಬ್ಬ ಹೆಣ್ಣು ಮಗಳು 'ನೋಡವ್ವ, ಇವರು ನಿನ್ನನ್ನು ಸಿನಿಮಾಕ್ಕೆ ಸೇರಿಸಿಕೊಳ್ಳಲು ಬಂದಿದ್ದಾರೆ' ಅಂದಳು.

ಆ ಮಾತು ಕೇಳಿದ ನಾರಾಯಣಿಗೆ ಸ್ವರ್ಗಕ್ಕೆ ಮೂರೇ ಗೇಣು ಉಳಿದಷ್ಟು ಸಂತೋಷವಾಯಿತು. ಆದರೂ ತೋರಿಸಿಕೊಳ್ಳಲು ಇಚ್ಛಿಸದೆ ಶಾಂತಸ್ವರದಲ್ಲಿ, 'ಹೀರೋಯಿನ್‌ಳ ರೋಲ್ ಅಂತೇನು? ಮತ್ತೆ ನೀವೆಲ್ಲ ನನ್ನ ಮೂಗು ಚಪ್ಪಟೆ ಅಂತ ಗೇಲಿ ಮಾಡ್ತೀರಲ್ಲ?'

ಅವರಲ್ಲಿದ್ದ ಒಬ್ಬ ಹೇಳಿದ: 'ಅದು ಹೀರೋಯಿನ್‌ಳ ರೋಲ್ ಅಲ್ಲ. ಹಾಗೆ ನೋಡಿದರೆ ಒಂದು ಬಗೆಯಲ್ಲಿ ಹಿರೋಯಿನ್‌ಳೇ. ಆದರೆ ಹತ್ತು ನಿಮಿಷಗಳ ಎರಡು ಸೀನ್ ಮಾತ್ರ'.

'ಅದಕ್ಕೆ ಬಜಾರ್ ಬಸವಿಯೇ ಏಕೆ ಬೇಕು?'

'ಬೇಕು, ಬೇಕು. ನೀನು ಮಾತ್ರ ಆ ರೋಲ್ ಮಾಡಬಹುದು. ನಾವು ಚೆನ್ನಾಗಿ ಗೌರವ ಧನಾನೂ ಕೊಡ್ತೀವಲ್ಲ. ಹತ್ತು ನಿಮಿಷದ ಪಾತ್ರಕ್ಕೆ ನಾವು ನಾಲ್ವತ್ತು ಸಾವಿರ ಕೊಡ್ತೀವಿ. ಸೈನಿಂಗ್ ಅಮೌಂಟು ಅಂತ ಈಗ ಹತ್ತುಸಾವಿರ ಕೊಡ್ತೀವಿ.'

'ಎಂಥ ಕೆಲಸವೊ ಯಾರಿಗೆ ಗೊತ್ತು. ನನ್ನಿಂದ ನಿಭಾಯಿಸಲಿಕ್ಕೆ ಆಗುತ್ತೊ ಇಲ್ಲವೊ?'

ನಿಜಕ್ಕೂ ಹಣದ ಮೊತ್ತ ನೋಡಿ ಅಲ್ಲಿದ್ದವರೆಲ್ಲ ಹೌಹಾರಿದರು. ಚಂದ್ರವ್ವ ಅಂದಳು, 'ಇಷ್ಟು ದುಡ್ಡು ದುಡಿಯೋಕ್ಕೆ ನೂರಿನ್ನೂರು ಹೆಣ ಮೈಮೇಲೆ ಹೊತ್ಕೋಬೇಕು. ಸಿನಿಮಾದಲ್ಲಿ ಯಾವ ಕೆಲಸವಾದರೇನು ಮಾಡಿ ಬಿಡು. 'ಆಗಲಿ' ಅಂತ ಒಪ್ಕೊಂಬಿಡು'.

